ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.
ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 7–9–2017

## ಪತ್ರಿಕಾ ಪ್ರಕಟಣೆ

ಸಂಖ್ಯೆ 35/161

# ನವೆಂಬರ್ – 23, 24 ರಂದು

# ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಅಭಿವೃದ್ಧಿ ಹಾಗೂ ಹೂಡಿಕೆದಾರರ ಸಮಾವೇಶ

– ಸಚಿವ ಆರ್.ವಿ. ದೇಶಪಾಂಡೆ

ಬೆಂಗಳೂರು, ಸೆಪ್ಟೆಂಬರ್ 7 ( ಕರ್ನಾಟಕ ವಾರ್ತೆ) :

ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಉತ್ತೇಜನ ನೀಡಲು ಹಾಗೂ ಉದ್ಯೋಗ ಸೃಷ್ಟಿಸುವ ಸಂಬಂಧ ನವೆಂಬರ್ 23, 24 ರಂದು ನಗರದಲ್ಲಿ ವ್ಯಾಪಾರ ಅಭಿವೃದ್ಧಿ ಹಾಗೂ ಹೂಡಿಕೆದಾರರ ಸಮಾವೇಶವನ್ನು ಆಯೋಜಿಸಲಾಗುವುದು ಎಂದು ಬೃಹತ್ ಕೈಗಾರಿಕಾ ಸಚಿವ ಆರ್. ವಿ. ದೇಶಪಾಂಡೆ ಅವರು ತಿಳಿಸಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಂದು ಸಮಾವೇಶದ ಲಾಂಛನ ಬಿಡುಗಡೆ ಮಾಡಿ ಹಾಗೂ ವೆಬ್‌ಸೈಟ್‌ಗೆ ಚಾಲನೆ ನೀಡಿ ಮಾತನಾಡಿದ ಸಚಿವರು ಸಣ್ಣ ಕೈಗಾರಿಕೆಗಳಿಂದಲೇ ಹೆಚ್ಚು ಉದ್ಯೋಗ ಸೃಷ್ಠಿ ಸಾಧ್ಯವಿದ್ದು ಸಣ್ಣ ಕೈಗಾರಿಕೆಗಳ ಬೆಳವಣಿಗೆಗೆ ಹೆಚ್ಚಿನ ಉತ್ತೇಜನ ನೀಡಬೇಕಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ತುಮಕೂರು ರಸ್ತೆಯಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ನವೆಂಬರ್ 23, 24 ರಂದು ಎರಡು ದಿನಗಳು ಈ ಸಮಾವೇಶ ನಡೆಯುಲಿದೆ. ದೇಶ, ವಿದೇಶಗಳ ಹಲವು ಸಣ್ಣ ಕೈಗಾರಿಕೆಗಳು ಈ ಸಮಾವೇಶದಲ್ಲಿ ಭಾಗವಹಿಸಲಿವೆ, ಉತ್ಪಾದನಾ ವಲಯಗಳಲ್ಲಿಯೂ ಹೆಚ್ಚು ಉದ್ಯೋಗ ಸೃಷ್ಠಿಯಾಗಲಿದೆ ಹಾಗಾಗಿ ಉತ್ಪಾಧನಾ ವಲಯಕ್ಕೆ ಈ ಸಮಾವೇಶದಲ್ಲಿ ಹೆಚ್ಚಿನ ಆಧ್ಯತೆ ನೀಡಲಾಗುತ್ತಿದೆ ಎಂದರು. ದೇಶದಲ್ಲಿ ಉತ್ಪಾಧನಾ ವಲಯ ನಾವಂದೂ ಕೊಂಡಂತೆ ಪ್ರಗತಿ ಕಂಡಿಲ್ಲ. ಬರುವ 2020 ರ ವೇಳೆಗೆ ಉತ್ಪಾದನಾ ವಲಯದಿಂದ ಜಿ.ಡಿ.ಪಿ. ಯು ಶೇ 20 ರಷ್ಟು ಪ್ರಗತಿ ಕಾಣಬೇಕು ಎನ್ನಲಾಗಿದೆ. ಆದರೆ ಸದ್ಯದಲ್ಲಿ 14 ರಷ್ಟು ಮಾತ್ರ ಉತ್ಪಾದನಾ ವಲಯದಲ್ಲಿ ಜಿ.ಡಿ.ಪಿ ಇದೆ ಎಂದು ಸಚಿವ ಆರ್.ವಿ. ದೇಶಪಾಂಡೆ ಅವತು ತಿಳಿಸಿದರು.

ಎರಡು ದಿನಗಳು ನಡೆಯುವ ಈ ಸಮಾವೇಶದಲ್ಲಿ ಏರೊಸ್ಪೆಸ್ ಮತ್ತು ಡಿಫೇನ್ಸ್ ಎಕ್ಯೂಮೆಂಟ್ಸ್ , ಜೈವಿಕ ಔಷಧಿ, ಕೃಷಿ ಮತ್ತು ಆಹಾರ ಸಂಸ್ಕರಣೆ, ಆಟೋಮೊಬೈಲ್ ಮತ್ತು ಜವಳಿ ವಿಷಯಗಳಿಗೆ ಸಂಬಂಧಿಸಿದಂತೆ ವಿಚಾರ ಸಂಕಿರಣಗಳನ್ನು ಏರ್ಪಡಿಸಲಾಗುವುದು.

ಸಮಾವೇಶದ ಯಶಸ್ವಿಗಾಗಿ ಮುಂಬೈ, ನವದೆಹಲಿ, ಚೆನ್ನೈ, ಹೈದರಾಬಾದ್, ಪೂನೆ, ಅಹಮದಾಬಾದ್ ಹಾಗೂ ಜಮ್‌ಷೆಡ್‌ಪುರಗಳಲ್ಲಿ ರೋಡ್ ಶೋಗಳನ್ನು ಏರ್ಪಡಿಸಿ ರಾಜ್ಯದಲ್ಲಿನ ಉತ್ಪಾದನಾ ಪರಿಸರ ಮತ್ತು ಹೂಡಿಕೆಗಿರುವ ವಿಫುಲ ಅವಕಾಶಗಳ ಬಗ್ಗೆ ಪರಿಚಯಿಸಲಾಗುವುದು ಎಂದರು.

ಕಳೆದ ನಾಲ್ಕು ವರ್ಷಗಳಲ್ಲಿ ದೇಶದಲ್ಲಿ ಉದ್ಯೋಗ ಅವಕಾಶಗಳು ಕಡಿಮೆಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ ಸಚಿವರು ರಾಜ್ಯದಲ್ಲಿ 15 ಲಕ್ಷ ಉದ್ಯೋಗ ಸೃಷ್ಟಿಸುವ ಗುರಿಹೊಂದಲಾಗಿದ್ದು, ನಿಗಧಿತ ಗುರಿ ಸಾಧಿಸಲಾಗುವುದು ಎಂದು ಸಚಿವರು ತಿಳಿಸಿದರು.

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಿ.ವಿ. ಪ್ರಸಾಧ್, ಕೈಗಾರಿಕೆ ಇಲಾಖೆಯ ಆಯುಕ್ತ ಧರ್ಪಣ್ ಜೈನ್, ಕೆ.ಐ.ಎ.ಡಿ.ಬಿ. ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಯರಾಂ, ಇನ್‌ವೆಸ್ಟ್ ಕರ್ನಾಟಕದ ವ್ಯವಸ್ಥಾಪಕ ನಿರ್ದೇಶಕ ದೀಪ್‌ಕ್ ಸೂದ್ ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಎಸ್‌ಎಂ:ಜೆಡಿ:ಜಿಪಿಆರ್

ಸಂಖ್ಯೆ 36/162

## " ಅನಾಥ ಶಿಶುಗಳ ರಕ್ಷಣೆಗೆ ಮಮತೆಯ ತೊಟ್ಟಿಲು"

ಬೆಂಗಳೂರು, ಸೆಪ್ಟೆಂಬರ್ 7 ( ಕರ್ನಾಟಕ ವಾರ್ತೆ) :

ಮಗು ಬೇಡವಾದಲ್ಲಿ, ಕಸದ ತೊಟ್ಟಿ, ಆಸ್ಪತ್ರೆ ಆವರಣ, ಶೌಚಾಲಯ, ರಸ್ತೆ ಬದಿ ಹಾಗೂ ಪೊದೆಗಳಲ್ಲಿ ಬಿಸಾಡಿ ಎಳೆಯ ಜೀವಗಳನ್ನು ಬೀದಿ ನಾಯಿ, ವಿಷ ಜಂತುಗಳಿಗೆ ಬಲಿ ನೀಡಿ ಹಿಂಸಿಸುವುದು ಬೇಡ, ಪರಿತ್ಯಕ್ತ ಮಕ್ಕಳ ರಕ್ಷಣೆಗಾಗಿಯೇ ಇರುವ ವಿಶೇಷ ದತ್ತು ಕೇಂದ್ರಗಳಲ್ಲಿ ಹಾಗು ಬಾಲಮಂದಿರಗಳಲ್ಲಿನ ಮಮತೆಯ ತೊಟ್ಟಿಲುಗಳಲ್ಲಿ ಮಕ್ಕಳನ್ನು ಬಿಡಿ ಎಂದು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನೂತನ ಬಿತ್ತಿ ಪತ್ರಗಳನ್ನು ಬಿಡುಗಡೆ ಮಾಡಿದೆ.

ಬೆಂಗಳೂರು ನಗರ ಜಿಲ್ಲೆಯ ಮಕ್ಕಳ ರಕ್ಷಣಾ ಘಟಕ, ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಕಾರದಲ್ಲಿ ಅನಾಥ ಶಿಶುಗಳ ರಕ್ಷಣೆಗೆ ಮಮತೆಯ ತೊಟ್ಟಿಲನ್ನು ಅಧೀಕ್ಷಕರು, ಸರ್ಕಾರಿ ಶಿಶುಮಂದಿರ, ಸುಧಾರಣಾ ಸಂಸ್ಥೆಗಳ ಸಂಕೀರ್ಣ, ಡಾ. ಎಂ.ಚ್. ಮರಿಗೌಡ ರಸ್ತೆ, ಬೆಂಗಳೂರು – 560 029 ಇಲ್ಲಿ ಇರಿಸಲಾಗಿದೆ.

ಮಮತೆಯ ತೊಟ್ಟಿಲಿನ ಮಾಹಿತಿ ಹಾಗೂ ವಿಳಾಸಕ್ಕಾಗಿ ದೂರವಾಣಿ 080 – 26569344 ಮೂಲಕ ಅಥವಾ ಇ–ಮೇಲ್ shishu.mandira@yahoo.in. ಗೆ ಮೇಲ್ ಮಾಡಬಹುದಾಗಿದೆ.

ಬಿತ್ತಿ ಪತ್ರದಲ್ಲಿ "ಎಚ್ಚರಿಕೆ : ಮಕ್ಕಳನ್ನು ಮಾರಾಟ ಮಾಡಬೇಡಿ" ಎಂಬ ಘೋಷಾ ವಾಕ್ಯದೊಂದಿಗೆ ಮಕ್ಕಳ ಮಾರಾಟ ಘೋರ ಅಪರಾಧ, ಮಾರಾಟ ಮಾಡುವವರಿಗೂ ಹಾಗೂ ಕೊಳ್ಳುವವರಿಗೆ 5 ವರ್ಷಗಳ ಸೆರೆಮನೆ ವಾಸದ ಜೊತೆಗೆ ರೂ 1,00,000/- ಗಳವರೆಗೆ ದಂಡ ವಿಧಿಸಲಾಗುವುದು. ಈ ಅಪರಾಧದಲ್ಲಿ ಆಸ್ಪತ್ರೆಯವರು ಶಾಮೀಲಾದಲ್ಲಿ ಶಿಕ್ಷೆಯ ಅವಧಿ 7 ವರ್ಷಗಳವರೆಗೆ ವಿಸ್ತರಣೆ (ಬಾಲನ್ಯಾಯ ಕಾಯ್ದೆ 2015) ಮಾಡುವ ಮೂಲಕ ಕಟ್ಟುನಿಟ್ಟಿನ ಕ್ರಮವನ್ನು ಜರುಗಿಸಲಾಗುವುದು ಎಂಬ ಎಚ್ಚರಿಕೆಯನ್ನು ಸಹ ನೀಡಿದೆ.

**ಅನಾಥ ಶಿಶುಗಳು ಕಂಡು ಬಂದಲ್ಲಿ ಸಾರ್ವಜನಿಕರು ಹೆಚ್ಚಿನ ಮಾಹಿತಿಗಾಗಿ ಮಕ್ಕಳ ಸಹಾಯವಾಣಿ – 1098, ಮಕ್ಕಳ ಕಲ್ಯಾಣ ಸಮಿತಿ – 080 – 26577821, ಪೊಲೀಸ್ ಸಹಾಯವಾಣಿ – 100, ವಿಶೇಷ ದತ್ತು ಕೇಂದ್ರ – ಸರ್ಕಾರಿ ಶಿಶುಗೃಹ – 080–26569344, ಮಾತೃಛಾಯ – 080–26713421, ಸೆಂಟ್ ಮೈಕಲ್ ಹೋಮ್ : 080–25200592, ಅನಾಥ ಶಿಶು ನಿವಾಸ : 080 –26675543, ಶಿಶುಮಂದಿರ – 080–25610456** ಸಂಪರ್ಕಿಸಬಹುದು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080–26560273, ಇ-ಮೇಲ್ **dcpoblor@gmail.com** ಮೇಲ್ ಮಾಡಬಹುದು, ಅಂತರ್ಜಾಲ **www.dcpublr.org** ದಲ್ಲಿ ವೀಕ್ಷಿಸಬಹುದಾಗಿದೆ.

ಎಸ್‌ಎಂ:ಜೆಡಿ:ಜಿಪಿಆರ್

**ಸಂಖ್ಯೆ 37/163**

## ಪ್ರಧಾನ ಮಂತ್ರಿಗಳ ಶಿಷ್ಯವೇತನ : ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

ಬೆಂಗಳೂರು, ಸೆಪ್ಟೆಂಬರ್ 7 ( ಕರ್ನಾಟಕ ವಾರ್ತೆ) :

ವೃತ್ತಿಪರ ಪದವಿ ತರಗತಿಯಲ್ಲಿ ಪ್ರಥಮ ವರ್ಷಕ್ಕೆ ಪ್ರವೇಶ ಪಡೆದಿರುವ ಮಾಜಿ ಸೈನಿಕರ ಮಕ್ಕಳಿಗೆ ಪ್ರಧಾನ ಮಂತ್ರಿಗಳ ಶಿಷ್ಯವೇತನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಈ ಕುರಿತು ಕೇಂದ್ರೀಯ ಸೈನಿಕ ಬೋರ್ಡ್ ಸುತ್ತೋಲೆ ಹೊರಡಿಸಿದೆ. ಹೆಚ್ಚಿನ ವಿವರ ಪಡೆಯಲು ಸಂಬಂಧಪಟ್ಟ ಮಾಜಿ ಸೈನಿಕರು **website: www.ksb.gov.in** ಸಂಪರ್ಕಿಸುವಂತೆ ತಿಳಿಸಲಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ನವೆಂಬರ್ 15 ಕೊನೆಯ ದಿನವಾಗಿದೆ ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

********

ಎಸ್‌ಎಂ:ಜೆಡಿ:ಜಿಪಿಆರ್

ಸಂಖ್ಯೆ 38/164

# SANCTIONING OF PRIME MINISTER SCHOLARSHIP - INVITED ONLINE APPLICATION

**Bengaluru, Sept. 7 (Karnataka Information)**

**Kendriya Sainik Boad have invited online application to sanction Prime Miniter's scholarship to wards of Ex-servicemen who have jointed the first year of professional course.**

**Ex-sdrvicemen are hereby informed to visit Website : www.ksb.gov.in for detailed information. Last date to submit application online is 15, November 2017 sasy an Official Press Release.**

**sm/jd/gpr.**

ಸಂಖ್ಯೆ 39/165

# ಅವಧಿ ವಿಸ್ತರಣೆ

ಬೆಂಗಳೂರು, ಸೆಪ್ಟೆಂಬರ್ 7 ( ಕರ್ನಾಟಕ ವಾರ್ತೆ) :

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು 2018 ಏಪ್ರಿಲ್ ಮಾಹೆಯಲ್ಲಿ ನಡೆಯಲಿರುವ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳ ಶುಲ್ಕ ಹಾಗೂ ನಾಮಿನಲ್ ರೋಲ್ ಪ್ರಸ್ತಾವನೆಗಳನ್ನು ಸಲ್ಲಿಸುವ ದಿನಾಂಕವನ್ನು ವಿಸ್ತರಿಸಿ ಆದೇಶ ಹೊರಡಿಸಿದೆ.

ಖಾಸಗಿ ಅಭ್ಯರ್ಥಿಗಳು ಜಿಲ್ಲಾ ಉಪ ನಿರ್ದೇಶಕರ ಕಚೇರಿಯಲ್ಲಿ ನೋಂದಣಿ ಮಾಡಿಕೊಳ್ಳಲು ಕೊನೆಯ ದಿನಾಂಕ 12-09-2017. ಶಾಲೆಯವರು ಶಾಲಾ/ಖಾಸಗಿ/ಪುನರಾವರ್ತಿತ ಅಭ್ಯರ್ಥಿಗಳಿಂದ ಪರೀಕ್ಷಾ ಶುಲ್ಕ ಸ್ವೀಕಾರ ಮಾಡಲು 14-09-2017, ಪರೀಕ್ಷಾ ಶುಲ್ಕ ಬ್ಯಾಂಕಿಗೆ ಎನ್‌ಎಫ್‌ಟಿ ಚಲನ್ ಮೂಲಕ ಜಮೆ ಮಾಡಲು 16-09-2017, ನಾಮಿನಲ್ ರೋಲ್ ಪ್ರಸ್ತಾವನೆ ಹಾಗೂ ಬ್ಯಾಂಕ್ ಚಲನ್‌ನ ಮೂಲ ಪ್ರತಿ ಶಾಲೆಗಳಿಂದ ಮಂಡಳಿಗೆ ತಲುಪಿಸಲು 21-09-2017 ಹಾಗೂ ಹೊಸದಾಗಿ ಶಾಲಾ ಸಂಕೇತವನ್ನು ಮಂಡಳಿಯಿಂದ ಪಡೆಯಲು ಕೊನೆಯ ದಿನಾಂಕ 12-09-2017ರ ವರೆಗೆ ವಿಸ್ತರಿಸಲಾಗಿದೆ.

ಮೇಲ್ಕಂಡ ವಿಸ್ತರಣೆ ದಿನಾಂಕಗಳವರೆಗೆ ವಿದ್ಯಾರ್ಥಿಗಳಿಂದ ಶುಲ್ಕ ಸ್ವೀಕರಿಸಬಹುದಾಗಿದೆ ಎಂದು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಪ್ರಕಟಣೆ ತಿಳಿಸಿದೆ.

********

ಎಸ್‌ಎಂ:ಜೆಡಿ:ಜಿಪಿಆರ್

ಸಂಖ್ಯೆ 40/166

## ವಾರ್ಷಿಕ ಶಿಲ್ಪಕಲಾ ಪ್ರದರ್ಶನ – 2017

## ಕಲಾವಿದರಿಂದ ಶಿಲ್ಪಕಲಾಕೃತಿಗಳ ಆಹ್ವಾನ

ಬೆಂಗಳೂರು, ಸೆಪ್ಟೆಂಬರ್ 7 ( ಕರ್ನಾಟಕ ವಾರ್ತೆ) :

ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಸಾಂಪ್ರದಾಯಿಕ ಮತ್ತು ಸಮಕಾಲೀನ ಶಿಲ್ಪಕಲೆಯ ವಾರ್ಷಿಕ ಶಿಲ್ಪಕಲಾ ಪ್ರದರ್ಶನ – 2017 ಕ್ಕೆ ಕಲಾವಿದರಿಂದ ಶಿಲ್ಪಕಲಾಕೃತಿಗಳನ್ನು ಆಹ್ವಾನಿಸಲಾಗಿದೆ.

ಪ್ರದರ್ಶನಕ್ಕೆ ಕಳುಹಿಸುವ ಶಿಲ್ಪಗಳು ಗರಿಷ್ಠ ಎರಡು (2) ಅಡಿಗಳ ಪ್ರಮಾಣದ ಲೋಹ, ಮರ, ಕಲ್ಲು, ಮಿಶ್ರ ಮಾಧ್ಯಮದಲ್ಲಿ ಇರಬೇಕು. ಪ್ರದರ್ಶನಕ್ಕೆ ಬರುವ ಶಿಲ್ಪಕಲಾಕೃತಿಗಳಲ್ಲಿ 6 ಅತ್ಯುತ್ತಮ ಕಲಾಕೃತಿಗಳಿಗೆ ತಲಾ ರೂ 25,000 ಗಳ ಬಹುಮಾನ ನೀಡಲಾಗುವುದು.

ಕರ್ನಾಟಕದಲ್ಲಿ ಹುಟ್ಟಿದ ಅಥವಾ ಶಿಲ್ಪಕಲಾ ಪ್ರದರ್ಶನಕ್ಕೆ 5 ವರ್ಷ ಮೊದಲು ರಾಜ್ಯದಲ್ಲಿ ನೆಲೆಸಿರುವ 18 ರಿಂದ 45 ವರ್ಷದ ಒಳಗಿನ ಶಿಲ್ಪಿಗಳು ಪ್ರದರ್ಶನದಲ್ಲಿ ಭಾಗವಹಿಸಬಹುದು.

ಶಿಲ್ಪಕೃತಿಗಳನ್ನು ವಿವರಣಾ ಪತ್ರದ ಜೊತೆ ದಿನಾಂಕ : 10–10–2017 ರ ಒಳಗಾಗಿ ಅಕಾಡೆಮಿಗೆ ಕಚೇರಿ ವೇಳೆಯಲ್ಲಿ ಖುದ್ದಾಗಿ ತಲುಪಿಸಬೇಕು, ಪ್ರವೇಶ ಶುಲ್ಕ ರೂ 300.

ಶಿಲ್ಪಕೃತಿಗಳ ಪ್ರದರ್ಶನಕ್ಕೆ ಪ್ರವೇಶ ಪಡೆಯಲಿಚ್ಚಿಸುವವರು ವಿವರಣಾ ಪತ್ರವನ್ನು ಕಚೇರಿ ವೇಳೆಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ಶಿಲ್ಪಕಲಾ ಅಕಾಡೆಮಿಯಲ್ಲಿ ಅಥವಾ ರಾಜ್ಯದ ಎಲ್ಲಾ ಸಹಾಯಕ ನಿರ್ದೇಶಕರ ಕಚೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಥವಾ ಅಕಾಡೆಮಿ ಅಂತರ್ಜಾಲ www.karnatakashilpakalaacademy.org ಇಲ್ಲಿ ಸಹ ಪಡೆಯಬಹುದಾಗಿದೆ.

ಹೆಚ್ಚಿನ ವಿವರಗಳಿಗೆ ರಿಜಿಸ್ಟ್ರಾರ್, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, 1ನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 560 002 (ದೂ. 080–22278725) ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

*******

ಸಂಖ್ಯೆ 41/167

## ಸೆಪ್ಟೆಂಬರ್ ತಿಂಗಳ ಶುಕ್ರವಾರದ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮ

ಬೆಂಗಳೂರು, ಸೆಪ್ಟೆಂಬರ್ 7 ( ಕರ್ನಾಟಕ ವಾರ್ತೆ) :

ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಪರಿಷತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಯುವ ಬರಹಗಾರರು ಮತ್ತು ಕಲಾವಿದರ ಬಳಗ ಇವರ ಸಂಯುಕ್ತಾಶ್ರಯದಲ್ಲಿ ನಗರದ ಭಾರತೀಯ ವಿದ್ಯಾಭವನ, ಇಲ್ಲಿ ತಿಂಗಳ ಶುಕ್ರವಾರದ ದಿನಗಳಂದು ಸಂಜೆ **6.30** ಗಂಟೆಗೆ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ದಿನಾಂಕ: **08-9-2017** ರ ಶುಕ್ರವಾರದಂದು ಬೆಂಗಳೂರಿನ ಶ್ರೀಮತಿ ಯಶೋದಾ ಶಶಿಧರ ಅವರಿಂದ ಶಾಡೋ ಪಪೆಟ್, ದಿನಾಂಕ: **15-09-2017** ರ ಶುಕ್ರವಾರದಂದು ಬೆಂಗಳೂರಿನ ಕು. ಶೋಭಾ ಎನ್. ಅವರಿಂದ ಭರತನಾಟ್ಯ, ದಿನಾಂಕ: **22-09-2017** ರ ಶುಕ್ರವಾರದಂದು ಬೆಂಗಳೂರಿನ ಡಾ. ಸ್ಯಾಮುಯೆಲ್ ಸುನೀಲ ರಾಜಶೇಖರ ಅವರಿಂದ ಕುಚಿಪುಡಿ ಹಾಗೂ ದಿನಾಂಕ: **29-09-2017** ರ ಶುಕ್ರವಾರದಂದು ಬೆಂಗಳೂರಿನ ಕು. ಹರಿಣೀ ಎಮ್.ಎನ್. ಅವರಿಂದ ಕರ್ನಾಟಕ ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಸಂಖ್ಯೆ 42/168

ಕಾವೇರಿ ಎಂಪೋರಿಯಮ್‌ನಿಂದ

## 'ಕಾವೇರಿ ಲಾಯಲ್ಟಿ ಕಾರ್ಡ್' ಹಾಗೂ 'ಕಾವೇರಿ ಗಿಫ್ಟ್ ಕಾರ್ಡ್' ಬಿಡುಗಡೆ

ಬೆಂಗಳೂರು, ಸೆಪ್ಟೆಂಬರ್ 7 ( ಕರ್ನಾಟಕ ವಾರ್ತೆ) :

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತದ ಕಾವೇರಿ ಎಂಪೋರಿಯಮ್ ನೂತನವಾಗಿ ಹೊರ ತಂದಿರುವ 'ಕಾವೇರಿ ಲಾಯಲ್ಟಿ ಕಾರ್ಡ್ ಮತ್ತು ಕಾವೇರಿ ಗಿಫ್ಟ್ ಕಾರ್ಡು'ಗಳನ್ನು ಪರಿಚಯಿಸುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮದ ವಸ್ತುಗಳ ಮಾರಾಟ ಮತ್ತು ವಹಿವಾಟು ಹೆಚ್ಚಾಗಬಹುದು ಎಂಬ ನಿರೀಕ್ಷೆ ಹೊಂದಲಾಗಿದೆ ಎಂದು ಸಣ್ಣ ಕೈಗಾರಿಕೆ ಹಾಗೂ ಸಕ್ಕರೆ ಸಚಿವೆ ಡಾ: ಎಂ.ಸಿ. ಮೋಹನಕುಮಾರಿ (ಗೀತಾ) ಅವರು ತಿಳಿಸಿದರು.

ವಿಧಾನ ಸೌಧದ ತಮ್ಮ ಕಛೇರಿಯಲ್ಲಿ ಇಂದು ಕಾವೇರಿ ಲಾಯಲ್ಟಿ ಮತ್ತು ಕಾವೇರಿ ಗಿಫ್ಟ್ ಕಾರ್ಡುಗಳನ್ನು ಬಿಡುಗಡೆ ಮಾಡಿ ಮಾತನಾಡಿದ ಸಚಿವರು ಕಾವೇರಿ ಲಾಯಲ್ಟಿ ಕಾರ್ಡುಗಳನ್ನು ಮೂರು ಶ್ರೇಣಿಗಳಲ್ಲಿ ಪರಿಚಯಿಸುತ್ತಿದ್ದು ಕಾವೇರಿ ಸಿಲ್ವರ್‌ಕಾರ್ಡ್, ಕಾವೇರಿ ಗೋಲ್ಡ್‌ಕಾರ್ಡ್ ಹಾಗೂ ಕಾವೇರಿ ಪ್ಲಾಟಿನಂ ಕಾರ್ಡುಗಳನ್ನು ನಿಗಮದ ಎಲ್ಲಾ ಕಾವೇರಿ ಮಳಿಗೆಗಳಲ್ಲಿ ಗ್ರಾಹಕರಿಗೆ ನೀಡಲಾಗುವುದು ಎಂದು ತಿಳಿಸಿದರು.

ಕಾವೇರಿ ಮಳಿಗೆಗಳಲ್ಲಿ ಗ್ರಾಹಕರು ಖರೀದಿಸಿದ ವಸ್ತುಗಳ ಮೌಲ್ಯಕ್ಕೆ ಅನುಗುಣವಾಗಿ ರಿವಾರ್ಡ್ ಪಾಯಿಂಟ್ಸ್‌ನ್ನು ಅವರ ನೋಂದಾಯಿತ ಕಾವೇರಿ ಲಾಯಲ್ಟಿ ಕಾರ್ಡುಗಳಿಗೆ ಕ್ರೆಡಿಟ್ ಮಾಡಲಾಗುವುದು, ನಿಗಮವು ರೂ. **1000**, ರೂ. **2000** ಹಾಗೂ ರೂ. **5000** ಮುಖಬೆಲೆ ಮೌಲ್ಯದ ಕಾವೇರಿ ಗಿಫ್ಟ್ ಕಾರ್ಡುಗಳನ್ನು ಸಹ ನಿಗಮದ ಎಲ್ಲಾ ಕಾವೇರಿ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರಲಿವೆ ಎಂದು ಹೇಳಿದರು.

**ಕಾವೇರಿ ಕರಕುಶಲ ಮಳಿಗೆಗಳನ್ನು ವಿದೇಶಗಳಲ್ಲೂ ಆರಂಭಿಸಲು ಯೋಜಿಸಲಾಗಿದೆ, ಸದ್ಯದಲ್ಲೇ ಆಸ್ಟ್ರೇಲಿಯಾದಲ್ಲಿ ಕೇಂದ್ರ ಪ್ರಾರಂಭಿಸಲು ಈಗಾಗಲೇ ಅಲ್ಲಿನ ವ್ಯಾಪಾರದಾರರನ್ನು ಗುರುತಿಸುವ ಕಾರ್ಯ ಆರಂಭವಾಗಿದೆ.**

**ರಾಜ್ಯದಲ್ಲಿ ಕೆಲವು ಸಣ್ಣ ಕೈಗಾರಿಕೆಗಳು ಸಂಕಷ್ಟದಲ್ಲಿದ್ದು ಅವುಗಳ ಪುನಶ್ಚೇತನಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ತಿಳಿಸಿದರು.**

**ಈ ಸಮಯದಲ್ಲಿ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ ಮತ್ತು ಕಾವೇರಿ ಎಂಪೋರಿಯಮ್‌ನ ಉನ್ನತ ಅಧಿಕಾರಿಗಳು ಉಪಸ್ಥಿತರಿದ್ದರು.**

**ಎಸ್‌ಎಂ;ಕೆಪಿಪಿ:ಕೆಎಂ.**

**ಸಂಖ್ಯೆ 43/169**

ದೆಹಲಿಯಲ್ಲಿ ಕನ್ನಡ ಅನುಷ್ಠಾನ ಕುರಿತಂತೆ ಪ್ರಗತಿ ಪರಿಶೀಲನಾ ಸಭೆ

**ಬೆಂಗಳೂರು, ಸೆಪ್ಟೆಂಬರ್ 7 ( ಕರ್ನಾಟಕ ವಾರ್ತೆ) :**

ಬ್ಯಾಂಕಿಂಗ್ ಕ್ಷೇತ್ರದ ನೇಮಕಾತಿಗಳಲ್ಲಿ ಸ್ಥಳೀಯರಿಗೆ ಅವಕಾಶ ಕಲ್ಪಿಸಬೇಕೆಂದು ಆಗ್ರಹಿಸಿ ಪ್ರಧಾನ ಮಂತ್ರಿ ಹಾಗೂ ವಿತ್ತ ಸಚಿವರ ಭೇಟಿಗಾಗಿ ನವದೆಹಲಿಗೆ ಆಗಮಿಸಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ನೇತೃತ್ವದ ನಿಯೋಗ ಇಂದು ಕರ್ನಾಟಕ ಭವನದ ನಿವಾಸಿ ಆಯುಕ್ತರ ಕಛೇರಿಯ ಆಡಳಿತದಲ್ಲಿ ಕನ್ನಡ ಅನುಷ್ಠಾನ ಕುರಿತಂತೆ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿತು.

ಕಡತಗಳ ಟಿಪ್ಪಣಿಗಳಲ್ಲಿ ಆಂಗ್ಲ ಭಾಷೆಯನ್ನು ಬಳಸುತ್ತಿರುವ ಅಧಿಕಾರಿ ಸಿಬ್ಬಂದಿಗಳ ಮೇಲೆ ಕೂಡಲೇ ಶಿಸ್ತು ಕ್ರಮ ಜಾರಿ ಮಾಡುವಲ್ಲಿ ಕಾರಣ ಕೇಳಿ ನೋಟಿಸ್‌ಗಳನ್ನು ನೀಡಲು ಪ್ರೊ. ಎಸ್.ಜಿ.ಎಸ್. ನಿವಾಸಿ ಆಯುಕ್ತರಾದ ನಿಲಯ್ ಮಿತಶ್‌ರವರಿಗೆ ಸೂಚಿಸಿದರು.

ಹೊರಗುತ್ತಿಗೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ 224 ಸಿಬ್ಬಂದಿಗಳ ಪೈಕಿ ಕೇವಲ 16 ಜನ ಮಾತ್ರ ಕನ್ನಡಿಗರಿದ್ದು, ಇದನ್ನು ಗಂಭೀರವಾಗಿ ಪರಿಗಣಿಸಿ ಮೂರು ತಿಂಗಳೊಳಗೆ ಈ ಎಲ್ಲಾ ಕನ್ನಡೇತರ ನೌಕರರನ್ನು ಸೇವೆಯಿಂದ ಬಿಡುಗಡೆ ಮಾಡಲು ಸೂಚನೆ ನೀಡಲಾಯಿತು.

ದೆಹಲಿಯ ಕನ್ನಡ ಶಾಲೆಗಳಿಗೆ ಕನ್ನಡ ಪುಸ್ತಕಗಳನ್ನು ಒದಗಿಸುವಲ್ಲಿ ವಿಳಂಬವಾಗಿರುವ ಅಂಶವನ್ನು ಗಂಭೀರವಾಗಿ ಅವಲೋಕಿಸಿ ಕೂಡಲೇ ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಪರ್ಕಿಸಿ ಅಗತ್ಯ ವ್ಯವಸ್ಥೆ ಮಾಡಲು ನಿವಾಸಿ ಆಯುಕ್ತರಿಗೆ ಸೂಚಿಸಿದರು.

ಕರ್ನಾಟಕ ಭವನದ ಆಡಳಿತ ಕನ್ನಡಿಗರ ಹಿತದೃಷ್ಟಿಯಿಂದ ನಡೆಸಬೇಕಿದ್ದು ಕೇಂದ್ರದ ಯೋಜನೆಗಳು ರಾಜ್ಯದಲ್ಲಿ ಸಮರ್ಥವಾಗಿ ಅನುಷ್ಠಾನವಾಗುವ ನಿಟ್ಟಿನಲ್ಲಿ

ಈ ಕಛೇರಿ ಕೊಂಡಿಯಂತೆ ಕಾರ್ಯನಿರ್ವಹಿಸಬೇಕಾಗಿದೆ ಎಂದು ಪ್ರೊ. ಎಸ್.ಜಿ.ಎಸ್. ಹೇಳಿದರು.

ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಾಹಿತಿಗಳಾದ ಪ್ರೊ. ಕೆ. ಮರುಳಸಿದ್ದಪ್ಪ, ಡಾ. ಸಿದ್ದಲಿಂಗಯ್ಯ, ಶ್ರೀಮತಿ ಬಿ.ಟಿ. ಲಲಿತ ನಾಯಕ್, ಡಾ. ಎಲ್. ಹನುಮಂತಯ್ಯ ಹಾಗೂ ಮಾಜಿ ಶಾಸಕರಾದ ಡಾ. ಮುಖ್ಯಮಂತ್ರಿ ಚಂದ್ರು,ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಡಾ. ಮನು ಬಳಿಗಾರ್, ನಿವೃತ್ತ ಬ್ಯಾಂಕ್ ಅಧಿಕಾರಿಗಳಾದ ಶ್ರೀ ರವೀಂದ್ರ ಬಿ.ಎಸ್. ಮತ್ತು ನಾರಾಯಣ ರಾಯಚೂರು ಮತ್ತು ಪ್ರಾಧಿಕಾರದ ಕಾರ್ಯದರ್ಶಿಗಳಾದ ಡಾ. ಕೆ. ಮುರಳಿಧರ ಅವರುಗಳು ಹಾಜರಿದ್ದರು.

ನಂತರ ನವದೆಹಲಿಯ ಜವಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ನೂತನವಾಗಿ ಸ್ಥಾಪನೆಯಾಗಿರುವ ಕನ್ನಡ ಅಧ್ಯಯನ ಪೀಠಕ್ಕೆ ಭೇಟಿ ನೀಡಿ ಸಂಸ್ಥೆಯ ಕಾರ್ಯಚಟುವಟಿಕೆಗಳ ಕುರಿತಂತೆ ಅವಲೋಕಿಸಿತು. ಈ ಸಂದರ್ಭದಲ್ಲಿ ಕನ್ನಡ ಪೀಠದ ಮುಖ್ಯಸ್ಥರಾದ ಪ್ರೊ. ಪುರುಶೋತ್ತಮ ಬಿಳಿಮಲೆ ರವರು ಹಾಜರಿದ್ದರು.

**ಸಂಖ್ಯೆ 44/170**

## ವಿಮೆ ಮಾಡದ ಎತ್ತು/ಹಸುಗಳ ಆಕಸ್ಮಿಕ ಮರಣಕ್ಕೆ ರೈತರಿಗೆ ರೂ.10,000/– ಪರಿಹಾರ ಯೋಜನೆ

**ಬೆಂಗಳೂರು, ಸೆಪ್ಟೆಂಬರ್ 7 ( ಕರ್ನಾಟಕ ವಾರ್ತೆ) :**

ಪ್ರಸ್ತುತ ಸಾಲಿನ ಅಯವ್ಯಯದಲ್ಲಿ ಘೋಷಣೆಯಾಗಿರುವ ವಿಮೆ ಮಾಡದ ಎತ್ತು/ಹಸುಗಳ ಆಕಸ್ಮಿಕ ಮರಣದಿಂದ ಆರ್ಥಿಕ ಸಂಕಷ್ಟ ಅನುಭವಿಸುವ ರೈತರಿಗೆ ಸಂಕಷ್ಟ ಪರಿಹಾರಕ್ಕಾಗಿ ಪ್ರತಿ ರಾಸಿಗೆ ರೂ.10,000/– ರಂತೆ ಪರಿಹಾರಧನ ನೀಡುವ ಯೋಜನೆಯ ಸೌವಲತ್ತನ್ನು ರೈತರು ಪಡೆಯುವಂತೆ ಪಶು ಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಆಯುಕ್ತರು ಮನವಿ ಮಾಡಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು ರೈತರಿಗೆ ಹಾಗೂ ಸಾರ್ವಜನಿಕರಿಗೆ ಯೋಜನೆಯ ವಿವರಗಳನ್ನು ತಿಳಿಸಿದ್ದಾರೆ. **ಸಾಮಾನ್ಯವಾಗಿ ರೈತರು ಹಾಲು ಹಿಂಡುವ ರಾಸುಗಳನ್ನು ಮಾತ್ರ ಜಾನುವಾರು ವಿಮೆಗೆ ಒಳಪಡಿಸುತ್ತಿದ್ದು, ವಿಮೆ ಮಾಡದ ಎತ್ತು/ಹಸುಗಳ ಆಕಸ್ಮಿಕ ಮರಣದಿಂದ ಆರ್ಥಿಕ ಸಂಕಷ್ಟ ಅನುಭವಿಸುವ ರೈತರಿಗೆ ಪ್ರತಿ ರಾಸಿಗೆ ರೂ.10,000/–ರಂತೆ ಪರಿಹಾರ (EXGratia) ನೀಡಿ, ರೈತರ ಸಂಕಷ್ಟ ಪರಿಹರಿಸುವುದು ಯೋಜನೆಯ ಮೂಲ ಉದ್ದೇಶವಾಗಿರುತ್ತದೆ.**

**ಸದರಿ ಯೋಜನೆಯು 2017–18 ನೇ ಸಾಲಿನ ಅಯವ್ಯಯದಲ್ಲಿ ಘೋಷಣೆಯಾಗಿರುವಂತೆ ಅನುಷ್ಠಾನಗೊಳಿಸಲಾಗುತ್ತಿದೆ. 2017–18 ಸಾಲಿಗೆ ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆಯ ಅನುದಾನದಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ರೂ.700 ಲಕ್ಷಗಳ ಅನುದಾನ ನಿಗದಿ ಪಡಿಸಲಾಗಿದೆ.**

**ಸರ್ಕಾರದ ಮಾರ್ಗಸೂಚಿ ಅನುಸಾರ ಯೋಜನೆಯ ಸೌಲಭ್ಯ ಪಡೆಯಲು ನಿಗದಿತ ನಮೂನೆಯಲ್ಲಿ ಪರಿಹಾರ ಮಂಜೂರಾತಿಗೆ ಸ್ಥಳೀಯ ಪಶುವೈದ್ಯಾಧಿಕಾರಿಗಳು/ಸಹಾಯಕ ನಿರ್ದೇಶಕರು ಮೂಲಕ ಜಿಲ್ಲಾ ಪರಿಶೀಲನಾ ಸಮಿತಿಯಲ್ಲಿ ಅರ್ಜಿ ಸಲ್ಲಿಸಿ ಅಗತ್ಯ ದಾಖಲಾತಿಗಳನ್ನು ಸಲ್ಲಿಸಬೇಕು.**

ಆಕಸ್ಮಿಕ ಮರಣ ಹೊಂದಿದ ಎತ್ತು/ಹಸುಗಳು ಇಲಾಖೆಯ ಯೋಜನೆಗಳು/ಬ್ಯಾಂಕ್ ಸಾಲ ಯೋಜನೆಗಳಿಂದ ವಿಮೆಗೆ ಒಳಪಟ್ಟಿರುವುದಿಲ್ಲವೆಂದು ಸಂಬಂಧಪಟ್ಟ ಪಶುವೈದ್ಯರಿಂದ ದೃಢೀಕರಣ ಪತ್ರ ಪಡೆಯಬೇಕು.

ಮರಣೋತ್ತರ ಪರೀಕ್ಷೆ ಮಾಡುತ್ತಿರುವ ರಾಸಿನ ಕಳೇಬರದೊಂದಿಗೆ ಪರೀಕ್ಷೆ ಮಾಡುತ್ತಿರುವ ಪಶುವೈದ್ಯರ ಕಲರ್ ಭಾವಚಿತ್ರ, ರಾಸುಗಳ ಮರಣೋತ್ತರ ವರದಿ, ಅಪಘಾತ ಸಂದರ್ಭದಲ್ಲಿ (FIR), ಪ್ರಾಥಮಿಕ ತನಿಖಾ ವರದಿ, ಪ್ರಾಣಿಯ ಮರಣ ಕಾಡು ಪ್ರಾಣಿಗಳಿಂದ ಸಂಭವಿಸಿದ್ದಲ್ಲಿ ಅರಣ್ಯ ಇಲಾಖೆಯಿಂದ ಪರಿಹಾರ ಪಡೆಯದಿಲ್ಲದಿರುವ ಬಗ್ಗೆ ದೃಢೀಕರಣ ಪ್ರಮಾಣ ಪತ್ರ ಹಾಗೂ ಅಗತ್ಯ ದಾಖಲಾತಿಗಳನ್ನು ಸಲ್ಲಿಸಬೇಕು.

ರಾಸುಗಳ ಮರಣವನ್ನು ಪ್ರತಿ ಮಾಹೆಯ ಪ್ರಗತಿಯ ವರದಿ **AHD 3 & 4** ನಲ್ಲಿ ದಾಖಲಿಸಿರುವ ಬಗ್ಗೆ ದೃಢೀಕರಣ ಪತ್ರ. 5 ಕ್ಕಿಂತ ಹೆಚ್ಚು ರಾಸುಗಳು ಮರಣ ಹೊಂದಿದಲ್ಲಿ ಪ್ರಯೋಗಾಲಯದಿಂದ ದೃಢೀಕರಣ ಪ್ರಮಾಣ ಪತ್ರ. ಫಲಾನುಭವಿಯ ಆಧಾರ್ ಸಂಖ್ಯೆ, ಮೊಬೈಲ್ ಸಂಖ್ಯೆ, ಬ್ಯಾಂಕಿನ ಉಳಿತಾಯ ಖಾತೆ **IFSC code and Name of the branch** ವಿವರಗಳನ್ನು ನೀಡಬೇಕು.

ಪರಿಹಾರ ಧನಕ್ಕೆ ಸಂಬಂಧಿಸಿದ ಮುಂಗಡ ಹಣ ಸಂದಾಯ ರಸೀದಿ (ನಿಗದಿತ ನಮೂನೆಯಲ್ಲಿ) ಸಲ್ಲಿಸಬೇಕು, ಯೋಜನೆಯ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಪಶುವೈದ್ಯಾದಿಕಾರಿಗಳನ್ನು ಭೇಟಿ ಮಾಡಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.